**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 34/2025** ಪಿ.ಡಬ್ಲ್ಯೂ 3

ಸಿ.ಡಬ್ಲ್ಯೂ.1

| | |
|---|---|
| ಸಾಕ್ಷಿದಾರರ ಹೆಸರು | ಮಲಕರಿಸಿದ್ಧ |
| ತಂದೆಯ ಹೆಸರು | ವಿಠಲ ಕಂಬಗಿ |
| ವಯಸ್ಸು | 27 ವರ್ಷ |
| ಉದ್ಯೋಗ | ಗಾರೆ ಕೆಲಸ |
| ವಿಳಾಸ | ಚಿಕ್ಕಲಕ್ಕಿ, ತಾಲೂಕು ಜಮಖಂಡಿ |

ದಿನಾಂಕಃ 19-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ಚಾಸಾ-2 ನನ್ನ ಅತ್ತೆಯ ಮಗ. ನನಗೆ ಚಾಸಾ-5 ಮತ್ತು 6 ಗೊತ್ತು. ನನಗೆ ಚಾಸಾ-3 ಮತ್ತು 4 ಗೊತ್ತಿಲ್ಲ. ಸುಮಾರು 8-9 ತಿಂಗಳ ಹಿಂದೆ ನಾನು ಕೂಲಿ ಕೆಲಸಕ್ಕಾಗಿ ಉಡುಪಿಗೆ ಬಂದಿದ್ದೆ. ಆಗ ನನ್ನೊಂದಿಗೆ ಚಾಸಾ-2 ಸಹ ಬಂದಿದ್ದ. ಆಗ ನಾವು ದಿನವಿಡೀ ಕೆಲಸ ಮಾಡಿ, ಶ್ರೀಕೃಷ್ಣ ಮಠದ ಬಳಿಯ ಪಾರ್ಕಿಂಗ್ ಏರಿಯಾದಲ್ಲಿ ಮಲಗಿರುತ್ತಿದ್ದೆವು. ಕೂಲಿ ಕೆಲಸಕ್ಕಾಗಿ ಸಿಟಿ ಬಸ್ಸು ನಿಲ್ದಾಣದ ಲೇಬರ್ ಸ್ಟಾಂಡ್ ಬಳಿ ಹೋಗುತ್ತಿದ್ದೆವು, ಅಲ್ಲಿಂದ ಕೆಲಸಕ್ಕಾಗಿ ಕರೆದುಕೊಂಡು ಹೋಗುತ್ತಿದ್ದರು.

2) ತಾರೀಕು 20-03-2025 ರಂದು ರಾತ್ರಿ 9.30 - 9.45 ರ ಸಮಯದಲ್ಲಿ ನಾನು ಮತ್ತು ಚಾಸಾ-2, ಸದರಿ ಪಾರ್ಕಿಂಗ್ ನಲ್ಲಿ ಮೊಬೈಲ್ ನೋಡಿಕೊಂಡು ಮಲಗಿದ್ದೆವು. ಆಗ ಒಬ್ಬ ಅಪರಿಚಿತ ಬಂದು ನನ್ನ ಬಳಿ ಇದ್ದ ಮೊಬೈಲ್ ನ್ನು ಕೇಳಿದ್ದ. ನಾನು ಮೊಬೈಲ್ ಕೊಡಲು ನಿರಾಕರಿಸಿದ್ದೆ, ಅದಕ್ಕಾಗಿ ಆತ ಚಾಕು ತೆಗೆದುಕೊಂಡು ನನ್ನ ಎದೆಯ ಎಡ ಭಾಗದಲ್ಲಿ ಚುಚ್ಚಿದ. ಆಗ ನಾನು ಹೆದರಿ ಓಡಲು ಆರಂಭಿಸಿದ್ದೆ. ಆತ ನನ್ನನ್ನು ಹಿಂಬಾಲಿಸಿದ್ಧ, ಚಾಸಾ-2 ನನ್ನನ್ನು ಬಿಡಿಸಲು ಬಂದಿದ್ದ, ಆಗ ಆ ಅಪರಿಚಿತ ವ್ಯಕ್ತಿ ಚಾಕುವಿನಿಂದ ಚಾಸಾ-2 ಈತನಿಗೂ ಹಲ್ಲೆ ಮಾಡಿದ್ದ,

2 ನೇ ಬಾರಿ ನನ್ನ ಹೊಟ್ಟೆಯ ಕೆಳಭಾಗದಲ್ಲಿ ಚುಚ್ಚಿದ್ದ. ಆಗ ಬಿಡಿಸಿಕೊಳ್ಳಲು ಬಂದಿದ್ದ ಇನ್ನೊಬ್ಬ ವ್ಯಕ್ತಿಗೂ ಆತ ಹಲ್ಲೆ ಮಾಡಿದ್ದ. ಆಗ ಅಲ್ಲಿ ಜನ ಸೇರಿದ್ದರು, ಆದ್ದರಿಂದ ನಮಗೆ ಹಲ್ಲೆ ಮಾಡಿದವನು ಓಡಿ ಹೋಗಿದ್ದ.

3) ಅಲ್ಲಿ ಸೇರಿದ್ದ ಜನ ನಮ್ಮನ್ನು ಅಜ್ಜರಕಾಡು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿಗೆ ಪೊಲೀಸರು ಬಂದು, ನನ್ನನ್ನು ವಿಚಾರಿಸಿದ್ದರು. ಮತ್ತು ಆಗ ಬರೆದುಕೊಂಡು ನನ್ನ ಸಹಿ ಪಡೆದಿದ್ದರು. ಸದರಿ ಸಹಿ ಮಾಡಿದ ದಾಖಲೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-6** ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-6(ಎ) ಎಂದು ಗುರುತಿಸಿದ್ದೇನೆ. ನಾನು ಆಸ್ಪತ್ರೆಯಲ್ಲಿ ಎರಡು ದಿನಗಳ ಕಾಲ ಉಪಚಾರ ಪಡೆದಿದ್ದೆ. ನಾನು ಹಲ್ಲೆಯ ದಿನ ತೊಟ್ಟಿದ್ದ ಬಟ್ಟೆಗಳು ರಕ್ತದ ಕಲೆಗಳು ಆಗಿತ್ತು. ಅದನ್ನು ಪೊಲೀಸರು ಪಡೆದಿದ್ದರು. ಆದಿನ ನಾನು ಪೊಲೀಸರಿಗೆ ಕೊಟ್ಟಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸಬಲ್ಲೆ. ಈಗ ಅವುಗಳನ್ನು ನೋಡಿ ಗುರುತಿಸಿದ್ದೇನೆ. ಈಗಾಗಲೇ ಅವುಗಳನ್ನು ಎಂಓ-2 ಮತ್ತು 3 ಎಂದು ಗುರುತಿಸಿದೆ.

4) ಆದಿನ ನಮಗೆ ಹಲ್ಲೆ ಮಾಡಿದ ವ್ಯಕ್ತಿಯನ್ನು ಈದಿನ ವಿ.ಸಿ ಮೂಲಕ ನೋಡಿ ಗುರುತಿಸಿದ್ದೇನೆ. ಎಂಓ-2 ಮತ್ತು 3 ರ ಪೋಟೋಗಳನ್ನು ಈಗ ನೋಡಿ ಅದನ್ನು **ನಿಶಾನೆ ಪಿ-7** ಎಂದು ಗುರುತಿಸಿದ್ದೇನೆ. ಆದಿನ ನನ್ನ ಹಲ್ಲೆಗೆ ಬಳಸಿದ್ದ ಚಾಕುವನ್ನು ಗುರುತಿಸಬಲ್ಲೆ. ಈಗ ಅದನ್ನು ನೋಡಿ ಗುರುತಿಸಿದ್ದೇನೆ. ಈಗಾಗಲೇ ಅದು ಎಂಓ-1 ಆಗಿದೆ. ನನಗೆ ನಂತರ ಆರೋಪಿಯ ಹೆಸರು ಗೊತ್ತಾಯಿತು. ನನ್ನ ಬಳಿಯಲ್ಲಿ ಇದ್ದ ಪೋನ್ ನ್ನು ಕಿತ್ತು ಕೊಳ್ಳಬೇಕೆಂದು ಆದಿನ ಆತ ಹಲ್ಲೆ ಮಾಡಿದ್ದ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಆರ್.ಪಿ. (ಎಲ್.ಎ.ಡಿ.ಸಿ) ವಕೀಲರಿಂದ**

1) ನನಗೆ ಆರೋಪಿಯ ಹೆಸರು ಪೊಲೀಸರಿಂದ ತಿಳಿದಿತ್ತು. ಆದಿನ ನಾವು ಮಲಗಿದ್ದ ಜಾಗೆ ಕೃಷ್ಣ ಮಠದ ಗೇಟಿನಿಂದ ಸುಮಾರು 50 – 60 ಅಡಿಗಳ ಅಂತರದಲ್ಲಿ ಮಲಗಿದ್ದೆವು. ನಾವು ಮಲಗಿದ್ದ ಜಾಗೆಯ ಬಯಲಿಗೆ ಬೇಲಿ ಹಾಕಿತ್ತು ಎಂದರೆ, ಆಗ ಹಾಕಿರಲಿಲ್ಲ. ಅಲ್ಲಿ ಯಾವುದೇ ಸಂಟ್ರಿಂಗ್ ಕೆಲಸ ನಡೆಯುತ್ತಿರಲಿಲ್ಲ . ನಮ್ಮೊಂದಿಗೆ ಇನ್ನೂ ಸುಮಾರು 20 – 30 ಜನರು ಅಲ್ಲಿಯೇ ಮಲಗಿದ್ದರು. ಆ ಜಾಗೆಯಲ್ಲಿ ಇಂಟರ್ ಲಾಕ್ ಗಳನ್ನು ಸಹ ಹಾಕಿರಲಿಲ್ಲ, ಅದು ಮಣ್ಣು ಇದ್ದ ಜಾಗೆ.

ನಾವು ಅಲ್ಲಿ ಚಾಪೆಯನ್ನು ಹಾಕಿಕೊಂಡು ಮಲಗಿದ್ದೆವು. ಆ ಜಾಗೆಯಲ್ಲಿ ನೂರಾರು ಜನ ಕೆಲಸಗಾರರು ಮಲಗುತ್ತಾರೆ ಎಂದರೆ ನಿಜ. ನಾನು ಮಲಗಿದ್ದ ಜಾಗೆಯಲ್ಲಿ ಕತ್ತಲು ಇತ್ತು ಎಂದರೆ ನಿಜ. ಆದರೆ ಸಂಪೂರ್ಣ ಕತ್ತಲೆ ಇರಲಿಲ್ಲ, ಅಲ್ಲಿಯೇ ಇದ್ದ ಲೈಟ್ ನ ಬೆಳಕು ಬೀಳುತ್ತಿತ್ತು.

2) ನನ್ನ ರಕ್ತದ ಕಲೆ ಚಾಪೆಗೆ ತಾಗಿದ್ದ ಬಗ್ಗೆ ಗಮನಿಸಲಿಲ್ಲ. ನಾನು ಮಲಗಿದ್ದ ಜಾಗೆಯ ಬಳಿ ಮನೆ ಇದೆ ಎಂದರೆ, ಅದು ಸುಮಾರು 40 – 50 ಅಡಿಗಳ ಅಂತರದಲ್ಲಿದೆ. ಹತ್ತಿರದಲ್ಲಿಯೇ ಕೃಷ್ಣ ಮಠದ ರಸ್ತೆ ಇದೆ ಎಂದರೆ, ನಾವು ಅದರ ಪಕ್ಕದಲ್ಲಿಯೇ ಮಲಗಿದ್ದೆವು. ನಾನು ಮಲಗಿದ್ದ ಜಾಗೆಯ ಹತ್ತಿರದಲ್ಲಿಯೇ ಇನ್ನೂ ಕೆಲ ಜನರು ಮಲಗಿದ್ದರು. ಅಕ್ಕಪಕ್ಕದಲ್ಲಿ ಮಲಗಿದ್ದವರು ಸಹ ಈ ಘಟನೆಯನ್ನು ನೋಡಿರಬಹುದು. ಆದಿನ ಚಾಸಾ-2 ಸಹ ನನ್ನೊಂದಿಗೆ ಮಲಗಿದ್ದ. ಆದಿನ ನಾನು ಮಲಗಿದ್ದ ಜಾಗೆಯಿಂದ ಗೇಟಿನ ಕಡೆಗೆ ಓಡಿದ್ದೆ. ಅಲ್ಲಿ ಸೆಕ್ಯುರಿಟಿಯವರು ಇದ್ದರು. ಅಲ್ಲಿ ಅನೇಕ ಜನರು ಇದ್ದರು. ಅಲ್ಲಿ ಗುಂಪಿನ ಘರ್ಷಣೆ ಆಗಿತ್ತು ಎಂದರೆ, ಗೊತ್ತಿಲ್ಲ. ಆದಿನದ ಗುಂಪು ಘರ್ಷಣೆಯಲ್ಲಿ ಚಾಸಾ-2 ಮತ್ತು ಇನ್ನೊಬ್ಬನಿಗೆ ಪೆಟ್ಟಾಗಿತ್ತು ಎಂದರೆ, ಅವರಿಬ್ಬರಿಗೂ ಆತನೇ ಚಾಕು ಹಾಕಿದ್ದ. ನನಗೆ ಆ ಗುಂಪು ಘರ್ಷಣೆಯಲ್ಲಿ ಪೆಟ್ಟಾಗಿತ್ತು, ನನಗೂ ಅಲ್ಲಿಯೂ ಸಹ ಪೆಟ್ಟಾಗಿತ್ತು ಮತ್ತು ಅದಕ್ಕೂ ಮೊದಲು ಸಹ ಪೆಟ್ಟಾಗಿತ್ತು.

3) ಅಲ್ಲಿಗೆ ಉಡುಪಿ ಕೃಷ್ಣ ಮಠದ ಬಳಿ ಇರುವ ಪೊಲೀಸರು ಸಹ ಬಂದಿದ್ದರು ಎಂದರೆ, ನಿಜ. ಅಲ್ಲಿ ಬಂದಿದ್ದ ಪೊಲೀಸರಿಗೆ ನಡೆದ ಘಟನೆಯ ಬಗ್ಗೆ ವಿಚಾರಿಸಿದಾಗ ಹೇಳಿದ್ದೇನೆ. ಆಗ ನಾನು ನಮಗೆ ಗುಂಪಿನಲ್ಲಿ ಗಲಾಟೆಯಾಗಿದೆ ಎಂದು, ನಮಗೆ ಹಲ್ಲೆ ಮಾಡಿದವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ಹೇಳಿದ್ದೇನೆ ಎಂದರೆ ನಿಜ. ಆಸ್ಪತ್ರೆಯಲ್ಲಿ ಉಪಚಾರ ಪಡೆಯುವಾಗಲೂ ಸಹ ನಾನು ನನಗೆ ಹಲ್ಲೆ ಮಾಡಿದವರು ಯಾರು ಎಂಬುದನ್ನು ಹೇಳಿಲ್ಲ ಎಂದರೆ, ಆಗಲೂ ಸಹ ಗೊತ್ತಿರಲಿಲ್ಲ, ಹೇಳಿಲ್ಲ. ಪೊಲೀಸರು ಆಸ್ಪತ್ರೆಯಲ್ಲಿ ನನ್ನನ್ನು ವಿಚಾರಿಸಿದ್ದು ಮಾರನೇ ದಿನ ಬೆಳಿಗ್ಗೆ ನನಗೆ ಪ್ರಜ್ಞೆ ಬಂದಾಗ ವಿಚಾರಿಸಿದ್ದರು. ಆಗಲೂ ಸಹ ನನಗೆ ಹಲ್ಲೆ

ಮಾಡಿದವರು ಯಾರು ಎಂದು ಗೊತ್ತಿರಲಿಲ್ಲ. ನಿಶಾನೆ ಪಿ-6 ರ ಹೇಳಿಕೆ ಕೊಟ್ಟಾಗಲೂ ಹಲ್ಲೆ ಮಾಡಿದವರು ಯಾರು ಎಂದು ಗೊತ್ತಿರಲಿಲ್ಲ.

4) ನಾನು ಆಸ್ಪತ್ರೆಯಲ್ಲಿಯೇ ಪೊಲೀಸರಿಗೆ ಬಟ್ಟೆಗಳನ್ನು ಕೊಟ್ಟಿದ್ದೆ. ಪೊಲೀಸರು ನನಗೆ ಹಲ್ಲೆ ಮಾಡಿದ ವ್ಯಕ್ತಿಯನ್ನು ತೋರಿಸಿ, ಗುರುತಿಸಿಕೊಂಡಿಲ್ಲ ಮತ್ತು ಆತನನ್ನು ನಾನು ಗುರುತಿಸುವುದ್ದಕ್ಕಾಗಿ ತಹಶೀಲ್ದಾರ್ ರಿಂದ ಯಾವುದೇ ಕವಾಯತು ಮಾಡಿಸಿಲ್ಲ. ಎಂಒ-1 ರಿಂದ ಹಲ್ಲೆಯಾಗಿತ್ತು ಎಂದು ಹೇಳಲು ಸಾಧ್ಯವಿಲ್ಲ ಎಂದರೆ ನಿಜ, ಆದರೆ ಅದನ್ನು ಆತನ ಕೈಯಲ್ಲಿಯೇ ಆದಿನ ನೋಡಿದ್ದೆ. ನಾನು ಹೇಳಿದಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತನಿಂದ ನನಗೆ ಯಾವುದೇ ಹಲ್ಲೆಯಾಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಮಾನಸಿಕ ಅಸ್ವಸ್ಥ ಎಂದರೆ ಸರಿಯಲ್ಲ. ನನಗೆ ಗುಂಪು ಘರ್ಷಣೆಯಲ್ಲಿ ಗಾಯಗಳಾಗಿದ್ದು, ಯಾರು ಹಲ್ಲೆ ಮಾಡಿದ್ದು ಗೊತ್ತಿಲ್ಲ ಎಂದರೆ ಸರಿಯಲ್ಲ. ನನಗೆ ಹಲ್ಲೆ ಮಾಡಿದ ದೂರಿಗಾಗಿ ಆರೋಪಿತನನ್ನು ಪೊಲೀಸರು ಕಲ್ಪಿಸಿದ್ದಾರೆ ಎಂದರೆ ಸರಿಯಲ್ಲ. ಎಂಒ-1 ರಿಂದ 3, ಇವುಗಳಿಗೂ, ಆರೋಪಿಗೂ, ಈ ವಿಚಾರಣೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈದಿನ ನಾನು ಪೊಲೀಸರ ಒತ್ತಾಯದ ಮೇರೆಗೆ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆರೋಪಿತನ ಹಲ್ಲೆಯಿಂದ ಯಾವುದೇ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

-ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.